# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಶೇಷ ಆಯುಕ್ತರು (ಆರೋಗ್ಯ) ರವರ ಕಛೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಎನ್.ಆರ್.ಚೌಕ,
ಬೆಂಗಳೂರು-560002.

ಸಂಖ್ಯೆ : ಮು.ಆ.ಅ(ಸಾ.ಆ)/ಪಿಆರ್/ಲ-02/2021-22 ದಿನಾಂಕ : 15/04/2021

## ಕಛೇರಿ ಆದೇಶ

ವಿಷಯ : ಕೋವಿಡ್-19 ನಿಯಂತ್ರಣ ಚಟುವಟಿಕೆಗಳಿಗೆ ಅವಶ್ಯವಿರುವ ಎಎಲ್‌ಎಸ್ ಆಂಬುಲೆನ್ಸ್ ವಾಹನಗಳನ್ನು ವಿಧಾನಸಭಾ ಕ್ಷೇತ್ರವಾರು ನಿಯೋಜಿಸುವ ಕುರಿತು.

ಉಲ್ಲೇಖ : 1. ಮುಖ್ಯ ಆರೋಗ್ಯಾಧಿಕಾರಿ (ಸಾ.ಆ) ರವರ ಕಾರ್ಯಾದೇಶ ಸಂಖ್ಯೆ: ಮು.ಆ.ಅ(ಸಾ.ಆ)/ಪಿಆರ್/ಪಿ-265/2021-22, ದಿನಾಂಕ: 23-03-2021.

2. ಮುಖ್ಯ ಆರೋಗ್ಯಾಧಿಕಾರಿ (ಸಾ.ಆ) ರವರ ಕಾರ್ಯಾದೇಶ ಸಂಖ್ಯೆ: ಮು.ಆ.ಅ(ಸಾ.ಆ)/ಪಿಆರ್/ಪಿ-265-1/2021-22, ದಿನಾಂಕ: 23-03-2021.

3. ದಿನಾಂಕ: 14-04-2021, ನಡೆದ ಸಭೆಯಲ್ಲಿ ಮಾನ್ಯ ಮುಖ್ಯ ಆಯುಕ್ತರ ಸೂಚನೆಯ ಮೇರೆಗೆ.

*********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕೋವಿಡ್-19 ಪ್ರಕರಣಗಳನ್ನು ರೋಗಿಯ ಮನೆಯಿಂದ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಪ್ರತಿ ವಾರ್ಡ್‌ಗೆ ಒಂದು ಆಂಬುಲೆನ್ಸ್ ವಾಹನವನ್ನು ನಿಯೋಜಿಸಲಾಗಿದೆ.

ಪ್ರಸ್ತುತ ಕೋವಿಡ್-19 ಪ್ರಕರಣಗಳು ಸರಾಸರಿ ಪ್ರತಿದಿನ 6,000ಕ್ಕೂ ಹೆಚ್ಚು ವರದಿ ಆಗುತ್ತಿದ್ದು, ರೋಗಿಗಳನ್ನು ಆಸ್ಪತ್ರೆಗೆ ದಾಖಲಿಸುವಲ್ಲಿ ಸಮಯ ವಿಳಂಬವಾಗದಂತೆ ನಿರ್ವಹಿಸಲು ಮಾನ್ಯ ಮುಖ್ಯ ಆಯುಕ್ತರು ಉಲ್ಲೇಖ (3)ರಂತೆ ಪ್ರತಿ ವಾರ್ಡ್‌ನಲ್ಲಿ 2 ಆಂಬುಲೆನ್ಸ್‌ಗಳಿರುವಂತೆ ವ್ಯವಸ್ಥೆ ಮಾಡಲು ಸೂಚಿಸಿರುತ್ತಾರೆ.

ಮುಂದುವರೆದು, ವಿಶೇಷ ಪ್ರಕರಣಗಳಲ್ಲಿ ರೋಗಿಗಳನ್ನು Tertiary ಆಸ್ಪತ್ರೆಗಳಿಗೆ ಸಾಗಿಸಲು ಎಎಲ್‌ಎಸ್ ಆಂಬುಲೆನ್ಸ್‌ಗಳ ಅವಶ್ಯಕತೆಯಿದ್ದು, ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಒಂದು ಎಎಲ್‌ಎಸ್ ಆಂಬುಲೆನ್ಸ್‌ನ್ನು ಪಡೆದುಕೊಳ್ಳಲು ಮಾನ್ಯ ಮುಖ್ಯ ಆಯುಕ್ತರು ಸೂಚಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಒಂದು ಎಎಲ್‌ಎಸ್ ಆಂಬುಲೆನ್ಸ್‌ನ್ನು ಎರಡು ದಿವಸದೊಳಗಾಗಿ ಒದಗಿಸಲು ಮೆ॥ ಟ್ರಾವೆಲ್ಸ್ ವರ್ಲ್ಡ್ ಸಂಸ್ಥೆಯವರಿಗೆ ಈ ಪತ್ರದ ಮೂಲಕ ಸೂಚಿಸಿದೆ.

ವಿಶೇಷ ಆಯುಕ್ತರು (ಆರೋಗ್ಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಗಳು:**

1. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2. ಮುಖ್ಯ ಆಯುಕ್ತರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
4. ಮಾನ್ಯ ಅಪರ ಆಯುಕ್ತರು (ಹಣಕಾಸು) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
5. ಮುಖ್ಯ ಆರೋಗ್ಯಾಧಿಕಾರಿ (ಸಾ.ಆ) ರವರ ಅಗತ್ಯ ಕ್ರಮಕ್ಕಾಗಿ ಹಾಗೂ ಮಾಹಿತಿಗಾಗಿ ಕಳುಹಿಸಿದೆ.
6. ವಲಯ ಎಲ್ಲಾ ಆರೋಗ್ಯಾಧಿಕಾರಿಗಳ ರವರ ಅಗತ್ಯ ಕ್ರಮಕ್ಕಾಗಿ ಹಾಗೂ ಮಾಹಿತಿಗಾಗಿ ಕಳುಹಿಸಿದೆ.
7. ಮೆ॥ ಟ್ರಾವೆಲ್ಸ್ ವರ್ಲ್ಡ್, ನಂ. 72/2, ನೆಲ ಮಹಡಿ ರೈಲ್ವೆ ಪ್ಯಾರ್ಲೆಲ್ ರಸ್ತೆ, ಕುಮಾರ ಪಾರ್ಕ್ (ಪಶ್ಚಿಮ), ಬೆಂಗಳೂರು–560020. ರವರಿಗೆ ಹೆಚ್ಚುವರಿ ವಾಹನಗಳನ್ನು ಒದಗಿಸಲು ಸೂಚಿಸಿದೆ.
8. ಕಛೇರಿ ಪ್ರತಿ.